ಉತ್ತಮ ಬದಲಾವಣೆ ಕಂಡು ಬಂದ ನಿರ್ದಿಷ್ಟ ಪ್ರಕರಣಗಳಿದ್ದರೆ, ಆ ಕುರಿತು ಪರಿಶೀಲನೆ ಮಾಡಿ ಅಂತಹ ಕೈದಿಗಳನ್ನು ಬಿಡುಗಡೆಗೊಳಿಸಲು ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಬಸನಗೌಡ ರಾಮನಗೌಡ ಪಾಟೀಲ್ (ಯತ್ನಾಳ್) :— ಅಂತಹ ಕಾರಾಗೃಹಗಳಿಗೆ ಸನ್ಮಾನ್ಯ ಬಂಧಿಖಾನೆ ಸಚಿವರು ಎಷ್ಟು ಸಲ ಭೇಟಿ ಕೊಟ್ಟಿದ್ದಾರೆಂದು ಹೇಳಬೇಕು.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ :— ನಾನು ಈಗಾಗಲೇ ಗುಲ್ಬರ್ಗ, ಧಾರವಾಡ ಮತ್ತು ಶಿವಮೊಗ್ಗದಲ್ಲಿರುವ ಕೇಂದ್ರ ಕಾರಾಗೃಹಗಳಿಗೆ ಭೇಟಿ ಕೊಟ್ಟಿದ್ದೇನೆ.

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಅಧ್ಯಕ್ಷರೆ, ಸಮಸ್ಯೆ ಇರುವಂಥ ಯಾವುದೇ ಜೈಲುಗಳಿಗೂ ಮಾನ್ಯ ಬಂಧಿಖಾನೆ ಸಚಿವರು ಭೇಟಿ ಕೊಡುತ್ತಿಲ್ಲ.

ಅಧ್ಯಕ್ಷರು :— ಮಾನ್ಯ ಶಿವಣ್ಣನವರೆ, ಇವರು ಯಾರು ಏನೇ ಹೇಳಲಿ, ಮೊದಲು ನಿಮ್ಮ ಮತಕ್ಷೇತ್ರ ನೋಡಿಕೊಳ್ಳಿ. ಯಾವ ಜೈಲಿಗೂ ನೀವು ಹೋಗುವುದು ಬೇಡ.

ಶ್ರೀ ಬಸನಗೌಡ ರಾಮನಗೌಡ ಪಾಟೀಲ್ (ಯತ್ನಾಳ್) :— ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವಂಥ ಉಪ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ. ಮೂರ್ನಾಲ್ಕು ವರ್ಷಗಳ ಹಿಂದೆ ಬಿಜಾಪುರ ಜಿಲ್ಲೆಯ ಕಾರಾಗೃಹದಲ್ಲಿದ್ದ ಒಬ್ಬ ಕುಖ್ಯಾತ ಕೊಲೆಗಡುಕನನ್ನು ಆರೋಗ್ಯದ ನೆಪದಲ್ಲಿ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಆತ ಅಲ್ಲಿಂದ ತಪ್ಪಿಸಿಕೊಂಡು ಓಡಿಹೋಗಿರುವ ಪ್ರಸಂಗದ ಬಗ್ಗೆ ತಾವು ಯಾವ ರೀತಿಯ ಕ್ರಮ ಕೈಗೊಂಡಿದ್ದೀರಿ ಹಾಗೂ ಇಲ್ಲಿಯವರೆಗೆ ಯಾವ್ಯಾವ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗಿದೆಯೆಂದು ಹೇಳಬೇಕು.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ :— ಸದ್ಯಕ್ಕೆ ನನ್ನ ಬಳಿ ಆ ಕುರಿತು ಮಾಹಿತಿ ಇಲ್ಲದಿರುವುದರಿಂದ ಅನಂತರ ತರಿಸಿಕೊಡುತ್ತೇನೆ.

ಅಧ್ಯಕ್ಷರು :— ತಾವು ನೋಟೀಸ್ ಕಳುಹಿಸಿಕೊಡಿ, ಮಾನ್ಯ ಸಚಿವರು ಮಾಹಿತಿ ತರಿಸಿಕೊಡುತ್ತಾರೆ.

ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳು.

ಶ್ರೀ ಡಿ. ಮಂಜುನಾಥ (ಅರಣ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, 25ನೇ ಪಟ್ಟಿಯಲ್ಲಿರುವ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ 50 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.